**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:20**

**ಎಸ್.ಸಿ. ಸಂಖ್ಯೆ: 10/2019 ಸಿಡಬ್ಲ್ಯೂ:28**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಡಾ. ಗೀತಾಲಕ್ಷ್ಮೀ |
| ಗಂಡನ **ಹೆಸರು** | : | ಸತ್ಯಮೂರ್ತಿ |
| **ವಯಸ್ಸು** | : | 47 ವರ್ಷ |
| **ವೃತ್ತಿ** | : | ಸಹಾಯಕ ನಿರ್ದೇಶಕರು, ಜೀವಶಾಸ್ತ್ರ ವಿಭಾಗ, ಪ್ರಾದೇಶಿಕ ನ್ಯಾಯವಿಜ್ಞಾನ ಪ್ರಯೋಗಾಲಯ, ಮಂಗಳೂರು |
| **ವಾಸ** | : | ಮಂಗಳೂರು |

**ದಿನಾಂಕ: 10-06-2022 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನಾನು 18 ವರ್ಷಗಳಿಂದ ಆರ್.ಎಫ್.ಎಸ್.ಎಲ್., ಮಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದಲ್ಲಿ ನನಗೆ ಪೊಲೀಸ್ ಅಧಿಕಾರಿಗಳು ಸ್ವಾಧೀನಪಡಿಸಿಕೊಂಡಿದ್ದ ಸ್ವತ್ತುಗಳ ರಾಸಾಯನಿಕ ಪರೀಕ್ಷೆ ಮಾಡಿ ವಿಶ್ಲೇಷಣಾ ವರದಿ ನೀಡಲು ಕೋರಿದ್ದು ಅದರಂತೆ ದಿನಾಂಕ 02-04-2019 ರಂದು 11 ಸೀಲು ಮಾಡಿದ ವಸ್ತುಗಳನ್ನು ಪಿಸಿ 18 ಇವರ ಮುಖಾಂತರ ಮೇಲಾಧಿಕಾರಿಗಳ ಕೋರಿಕೆ ಪತ್ರದ ಜೊತೆಯಲ್ಲಿ ಹಾಜರುಪಡಿಸಿದ್ದು, ಅದನ್ನು ಪರಿಶೀಲಿಸಿದಾಗ ವಸ್ತುಗಳು ಸುಸ್ಥಿತಿಯಲ್ಲಿದ್ದು ಅದರ ಮೇಲಿದ್ದ ಮೊಹರು ಮಾದರಿ ಮೊಹರಿಗೆ ತಾಳೆಯಾಗುತ್ತಿತ್ತು. ನಾನು ಸದ್ರಿ ವಸ್ತುಗಳಲ್ಲಿ ಎ ಎಂದು ಗುರುತಿಸಿದ ವಸ್ತುವನ್ನು ನಾನು ತೆರೆದು ನೋಡಿದಾಗ ಅದರಲ್ಲಿ ರಕ್ತದ ಸ್ವ್ಯಾಬ್ ಇದ್ದು, ಬಿ ಎಂದು ಗುರುತಿಸಿದ ವಸ್ತುವಿನಲ್ಲಿ ಒಂದು ಸೀರೆ ಇದ್ದು, ಸಿ ಎಂದು ಗುರುತಿದ ವಸ್ತುವಿನಲ್ಲಿ ಒಂದು ಲಂಗ, ಡಿ ಎಂದು ಗುರುತಿಸಿದ ವಸ್ತುವಿನಲ್ಲಿ 6 ಬಳೆ, ಇ ಎಂದು ಗುರುತಿಸಿದ ವಸ್ತುವಿನಲ್ಲಿ ಕುತ್ತಿಗೆಯ ಮೇಲೆ ಇರುವ ಗುರುತುಗಳನ್ನು ಗುರುತಿಸಲು ಪಡೆದುಕೊಂಡ ಟೇಪ್‌ನ ತುಂಡು, ಎಫ್ ಎಂದು ಗುರುತಿಸಿದ ವಸ್ತುವಿನಲ್ಲಿ ಉಗುರಿನಿಂದ ಪಡೆದುಕೊಂಡು ಹುಡಿ, ಜಿ ಎಂದು ಗುರುತಿಸಿದ ವಸ್ತುವಿನಲ್ಲಿ ಉಗುರಿನ

**ಎಸ್.ಸಿ. ಸಂಖ್ಯೆ: 10/2019**
**ಪಿಡಬ್ಲ್ಯೂ:20**
**ಸಿಡಬ್ಲ್ಯೂ:28**

ತುಣುಕುಗಳು, ಜೆ1 ಎಂದು ಗುರುತಿಸಿದ ವಸ್ತುವಿನಲ್ಲಿ ಮಾದರಿ ರಕ್ತ, ಪಿ1 ಜೀನ್ಸ ಪ್ಯಾಂಟ್, ಪಿ2 ಅಂಗಿ, ಪಿ3 ಟವೆಲ್ ಇದ್ದವು. ಈ ಎಲ್ಲ ವಸ್ತುಗಳನ್ನು ನಮ್ಮ ಪ್ರಯೋಗಾಲಯದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು ಆ ವಿಶ್ಲೇಷಣಾ ವರದಿಯನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಎ ಎಂದು ಗುರುತಿಸಿದ ವಸ್ತುವಿನಲ್ಲಿ ಮಾತ್ರ ರಕ್ತದ ಕಲೆ ಕಂಡು ಬಂದಿರುತ್ತದೆ. ಉಳಿದ ಯಾವುದೇ ವಸ್ತುವಿನಲ್ಲಿ ರಕ್ತದ ಕಲೆಗಳು ಕಂಡು ಬಂದಿರುವುದಿಲ್ಲ. ವಸ್ತು ಬಿ ಯಿಂದ ಜಿ, ಪಿ1 ರಿಂದ ಪಿ3 ವಸ್ತುಗಳನ್ನು ವಿಶ್ಲೇಷಣೆ ಮಾಡಿದಾಗ ಅದರಲ್ಲಿ ಚರ್ಮದ ತುಣುಕುಗಳು ಕಂಡು ಬಂದಿರುವುದಿಲ್ಲ. ಬಿ, ಸಿ, ಡಿ, ಎಫ್, ಜೆ, ಪಿ1 ರಿಂದ ಪಿ3 ರ ವಸ್ತುಗಳ ವಿಶ್ಲೇಷಣೆಯಲ್ಲಿ ಕೂದಲಿನ ಅಂಶಗಳು ಕಂಡು ಬಂದಿರುವುದಿಲ್ಲ. ಜೆ ಮಾದರಿ ರಕ್ತವನ್ನು ಮುಂದಿನ ಪರೀಕ್ಷೆಗಾಗಿ ನಾಂಕ 13-05-2019 ರಂದು ಟಾಕ್ಸಿಕಾಲಜಿ ವಿಭಾಗಕ್ಕೆ ವರ್ಗಾವಣೆ ಮಾಡಿರುತ್ತೇನೆ. ವಸ್ತು ಸಂಖ್ಯೆ:ಎ ಮತ್ತು ಜೆಯನ್ನು ಸಿರಾಲಜಿ ವಿಶ್ಲೇಷಣೆಗೆ ಒಳಪಡಿಸಿದಾಗ ವಸ್ತು ಸಂಖ್ಯೆ ಎ ನಲ್ಲಿ ಮಾನವ ರಕ್ತ ಕಂಡು ಬಂದಿದ್ದು ಜೆ ಯಲ್ಲಿರುವ ಮಾನವ ರಕ್ತದ ಗುಣಲಕ್ಷಣಗಳು ಹಾಳಾಗಿದ್ದರಿಂದ ಸದ್ರಿ ರಕ್ತದ ಮೂಲ ನಿರ್ಧರಿಸಲು ಆಗಿರುವುದಿಲ್ಲ. ಈ ಬಗ್ಗೆ ಸಿರಾಲಜಿ ವರದಿಯನ್ನು ನೀಡಿದ್ದೇನೆ. ಅದನ್ನು ನೋಡುತ್ತಿದ್ದು ನಿಪಿ-29 ಎಂದು ಗುರುತಿಸಿ ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು. ನಾನು ವಿಶ್ಲೇಷಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ-4, 5, 6, 8, 9 ,10 ಎಂದು ಗುರುತಿಸಲಾಗಿದೆ.

<u>**ಪಾಟೀ ಸವಾಲು:**</u> **ಆರೋಪಿ ಪರ ಶ್ರೀ ಎಂಎಸ್‌ಎಸ್ ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿದ್ದು ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**ಎಸ್.ಸಿ. ಸಂಖ್ಯೆ: 10/2019**
**ಪಿಡಬ್ಲ್ಯೂ:20**
**ಸಿಡಬ್ಲ್ಯೂ:28**

**ಮರು ವಿಚಾರಣೆ:** ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**